ಪಠಿಸುತ್ತಿದ್ದ. ವಯಸ್ಸಾಗಿದ್ದರೂ ಗವಿಸಿದ್ದಸ್ವಾಮಿ ಉತ್ಸಾಹದಿಂದ ಓಡಾಡುತ್ತಿದ್ದ. ಪ್ರಿನ್ಸಿಪಾಲ್ ವೆಂಕಟೇಶ್ ಪುರೋಹಿತ ಉಪನಿರ್ದೇಶಕರನ್ನು ಕರೆದೊಯ್ದು ಗರ್ಭಗುಡಿಯ ಒಳಗೆ ಮಾರುತೇಶ್ವರನ ಮೂರ್ತಿಗೆ ಎದುರಾಗಿ ನಿಲ್ಲಿಸಿ ಹೊರಬಂದರು. ದೇವರಿಗೆ ಮಂಗಳಾರತಿ ಬೆಳಗಿ ಆರತಿ ತಟ್ಟೆಯೊಂದಿಗೆ ಉಪನಿರ್ದೇಶಕರನ್ನು ಸಮೀಪಿಸಿದ ಮಾದೇವಸ್ವಾಮಿ ಅವರ ಮುಖವನ್ನು ದಿಟ್ಟಿಸಿ ನೋಡಿದ. ಊರ ಹೊರಗಿನ ಕೇರಿಯ ಮಾದನೊಂದಿಗೆ ಪದ್ಮನಾಭರನ್ನು ಪೇಟೆಯಲ್ಲಿ ನೋಡಿದ್ದ ಅಸ್ಪಷ್ಟ ಚಿತ್ರ ಅವನ ಕಣ್ಣೆದುರು ಸುಳಿದು ಹೋಯಿತು. 'ನಮ್ಮ ಸಂಬಂಧಿಕರು. ಸರ್ಕಾರದ ದೊಡ್ಡ ನೌಕರಿನಲ್ಲಿದ್ದಾರ. ಭಾಳ ಓದಿಕೊಂಡಾರ. ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್ ಮ್ಯಾಲ ತಾಸಗಟ್ಟಲೆ ಮಾತಾಡ್ತಾರ' ಎಂದು ಮಾದ ಅಭಿಮಾನದಿಂದ ಪದ್ಮನಾಭರನ್ನು ಪರಿಚಯಿಸಿದ್ದು ನೆನಪಾಯಿತು. ಕೋಪದಿಂದ ಕೈಯಲ್ಲಿದ್ದ ಮಂಗಳಾರತಿ ತಟ್ಟೆಯನ್ನು ಕೆಳಗೆ ಬೀಸಾಕಿ ಪದ್ಮನಾಭರನ್ನು ಅಕ್ಷರಶಃ ಕೈಹಿಡಿದೆಳೆದು ಹೊರತಂದು 'ಗುಡಿ ಮೈಲಿಗೆಗೊಳಿಸ್ಯಾರ. ಮಾರುತೇಶನ ಶಾಪ ತಟ್ಟದೆ ಬಿಡಂಗಿಲ್ಲ. ಇವರ ವಂಶ ಸರ್ವನಾಶ ಆಗತದ' ಎಂದು ಕೂಗಾಡತೊಡಗಿದ.

ತುಂಬಿದ ಗುಡಿಯಲ್ಲಿ ಪದ್ಮನಾಭರಿಗೆ ಅವಮಾನದಿಂದ ತಲೆ ತಗ್ಗಿಸುವಂತಾಯಿತು. 'ಇವ್ನೌನ, ದೇಶಕ್ಕ ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳಾದರೂ ಮಂದಿ ಮನಸ್ಥಿತಿ ಬದಲಾಗಿಲ್ಲ' ಎಂದು ಸಿಟ್ಟಿನಿಂದ ಜೀಪ್ ಹತ್ತಿ ಹೊರಟು ಹೋದರು. ನಡೆದುಹೋದ ಘಟನೆ ಅರಿವಿಗೆ ಬರಲು ಪ್ರಿನ್ಸಿಪಾಲ್ ಪುರೋಹಿತರಿಗೆ ಹಲವು ಕ್ಷಣಗಳೇ ಹಿಡಿದವು. ಮಾದೇವಸ್ವಾಮಿ ಮಾಡಿದ ತಪ್ಪಿನಿಂದ ಡೆಪ್ಯುಟಿ ಡೈರೆಕ್ಟರ್‌ರನ್ನು ಎದುರು ಹಾಕಿಕೊಳ್ಳಬೇಕಾತೇನೋ ಎನ್ನುವ ಆತಂಕ ಅವರನ್ನು ಕಾಡದೆ ಇರಲಿಲ್ಲ. ಆತಂಕದ ನಡುವೆಯೂ ಪದ್ಮನಾಭರಿಗೆ ತಕ್ಕ ಶಾಸ್ತಿಯಾಯಿತೆಂದು ಅವರ ಕರ್ಮಠ ಮನಸ್ಸು ವಿಕೃತ ಖುಷಿಪಟ್ಟಿತು.

ಈ ಘಟನೆಯ ನಂತರ ಮಾದೇವಸ್ವಾಮಿ ಊರು ಮತ್ತು ಸುತ್ತಲಿನ ಹಳ್ಳಿಗಳಲ್ಲಿ ಪ್ರಸಿದ್ಧನಾದ. ಸರ್ಕಾರಿ ಅಧಿಕಾರಿಯನ್ನೇ ಗುಡಿಯಿಂದ ಹೊರಹಾಕಿದನಂತೆ, ನಡುನೆತ್ತಿ ಮೂಸಿ ಅವರ ಕುಲದ ಮೂಲವನ್ನು ಪತ್ತೆ ಹಚ್ಚಿದನಂತೆ, ಮಾದೇವಸ್ವಾಮಿಗೆ ದಿವ್ಯಶಕ್ತಿ ಪ್ರಾಪ್ತವಾಗಿದೆಯಂತೆ ಎನ್ನುವ ಅಂತೆಕಂತೆಗಳಿಂದ ಅವನ ಖ್ಯಾತಿ ಹೆಚ್ಚಿತು. ಜನರು ಅವನನ್ನು ವಾಸಸ್ವಾಮಿ ಎಂದೇ ಕರೆಯತೊಡಗಿದರು. ನಡುನೆತ್ತಿಯನ್ನು ಮೂಸಿಸಿಕೊಳ್ಳುವವರ ಸಂಖ್ಯೆ ದಿನದಿಂದ ದಿನಕ್ಕೆ ವೃದ್ಧಿಸಿ ವಾಸಸ್ವಾಮಿಯ ಮನೆಯ ಆರ್ಥಿಕಸ್ಥಿತಿ ಸುಧಾರಿಸಿತು. 'ಭಾಳ ಹುಷಾರ ನನ್ಮಗ. ನಾ ಏನೋ ಅಂದ್ಕೊಂಡಿದ್ದೆ. ನನಕ್ಕಿಂತ ಹತ್ತು ಹೆಜ್ಜಿ ಮುಂದೆ ಅದಾನ' ಎಂದು ಅಪ್ಪ ಗವಿಸಿದ್ದಸ್ವಾಮಿ ನೆಂಟರಿಷ್ಟರೆದುರು ಅಭಿಮಾನದಿಂದ ಮಗನ ಗುಣಗಾನ ಮಾಡುವಷ್ಟು ವಾಸಸ್ವಾಮಿ ಪ್ರಸಿದ್ಧಿಗೆ ಬಂದು ಮುಂದೊಂದು ದಿನ ಕಾಲೇಜಿನ ಅಟೆಂಡರ್ ಕೆಲಸಕ್ಕೆ ರಾಜೀನಾಮೆ ನೀಡಿ ನಡುನೆತ್ತಿ ಮೂಸುವುದನ್ನೇ ಫುಲ್‌ಟೈಮ್ ಉದ್ಯೋಗ ಮಾಡಿಕೊಂಡ.

* * *

ಪ್ರತಿವರ್ಷಕ್ಕಿಂತ ಈ ವರ್ಷ ಅಪ್ಪನ ತಿಥಿಯನ್ನು ಅದ್ದೂರಿಯಾಗಿ ಆಚರಿಸಲು ನಿರ್ಧರಿಸಿದ ಶಿವನಗೌಡ ಪಾಟೀಲರು ವಾಸಸ್ವಾಮಿಯನ್ನೇ ಪೂಜೆಗೆ ಆಹ್ವಾನಿಸಿದ್ದರು. ಮುಂಬರುವ ಗ್ರಾಮಪಂಚಾಯಿತಿ ಚುನಾವಣೆಯೇ ತಿಥಿ ಆಚರಣೆಯ ಹಿಂದಿನ ಮಸಲತ್ತು ಎನ್ನುವ ಗುಮಾನಿ ಊರ ಜನರ ತಲೆಗೆ ಹೊಳೆಯದೇ ಇರಲಿಲ್ಲ. ವಾಸಸ್ವಾಮಿ ಈಗಾಗಲೇ ಊರಿನಲ್ಲಿ ಪ್ರಸಿದ್ಧನಾಗಿದ್ದು ಅವನಿಂದ ಪೂಜೆ ಮಾಡಿಸಿದಲ್ಲಿ ಅವನ ಭಕ್ತಗಣದ ಮತಗಳನ್ನು ಸುಲಭವಾಗಿ ಸೆಳೆಯಬಹುದೆನ್ನುವ ದೂರಾಲೋಚನೆ ಶಿವನಗೌಡರದಾಗಿತ್ತು. ಇಡೀ ಊರಿಗೆ ಭರ್ಜರಿ ಹಬ್ಬದೂಟ ಹಾಕಲು ಪಟ್ಟಣದಿಂದ ಬಾಣಸಿಗರನ್ನು ಕರೆಸಿದ್ದರು. ತಿಥಿಯ ದಿನ ಗೌಡರ ಕುಟುಂಬಸ್ಥರು, ದಾಯಾದಿಗಳು, ನೆಂಟರು, ಊರಿನ ಪ್ರಮುಖರಿಂದ ಮನೆ ಕಿಕ್ಕಿರಿದು ತುಂಬಿತ್ತು. ಮನೆಯ ಪಡಸಾಲೆಯ ಮಧ್ಯದಲ್ಲಿ ಶಿವನಗೌಡರ ಅಪ್ಪ ರುದ್ರೇಗೌಡರ ಭಾವಚಿತ್ರವನ್ನು ಹೂವುಗಳಿಂದ ಅಲಂಕರಿಸಿ ದೀಪಧೂಪ ಬೆಳಗಿ ಮಂತ್ರಪಠಿಸುತ್ತ ವಾಸಸ್ವಾಮಿ ಮಾಡುತ್ತಿದ್ದ ಪೂಜೆ ಇಡೀ ಮನೆಗೆ ದೈವಿಕ ಕಳೆಯನ್ನು ನೀಡಿತ್ತು. ವಾಸಸ್ವಾಮಿ ರುದ್ರೇಗೌಡರ ಭಾವಚಿತ್ರದೆದುರು ಮೂರು ದರ್ಭೆಕಡ್ಡಿಗಳನ್ನು ಸಾಲಾಗಿಟ್ಟು ತೀರ್ಥ ಪ್ರೋಕ್ಷಿಸಿ ಮೂರು ತಲೆಮಾರುಗಳ ಗೌಡರ ಆತ್ಮಗಳನ್ನು ಕಡ್ಡಿಗಳೊಳಗೆ ಆಹ್ವಾನಿಸಿದ. ತರೇವಾರಿ ಭಕ್ಷ್ಯಭೋಜನಗಳನ್ನು ಮೂರು ತಟ್ಟೆಗಳಲ್ಲಿಟ್ಟು ತನ್ನೆದುರಿನ ಮೂರು ದರ್ಭೆಕಡ್ಡಿಗಳಲ್ಲಿರುವ ಆತ್ಮಗಳಿಗೆ ಎಡೆ ನೀಡಿದ. ಮೊದಲ ಕಡ್ಡಿಯನ್ನು ಕೈಗೆ ತೆಗೆದುಕೊಂಡು ವಾಸನೆಯನ್ನೊಮ್ಮೆ ಆಘ್ರಾಣಿಸಿ 'ಗೌಡರ ಮುತ್ತಾತ ಅಣ್ಣೆಗೌಡರ ಆತ್ಮ ಎಡೆ ಉಂಡು ಸಂತೃಪ್ತಾಗ್ಯಾದ' ಎಂದ.

ಕುಟುಂಬದ ಸದಸ್ಯರೆಲ್ಲರು ಸಮಾಧಾನದ ನಿಟ್ಟುಸಿರು ಬಿಟ್ಟರು. ಎರಡನೆ ಕಡ್ಡಿ ಮೂಸಿ 'ಗೌಡರ ತಾತ ಶಂಕರೆಗೌಡರು ಎಡೆ ಉಂಡು ಖುಷಿಪಟ್ಟಾರ' ಎಂದ. ಕೊನೆಯ ಸರದಿಯಾಗಿ ರುದ್ರೇಗೌಡರ ಆತ್ಮವಿರುವ ಕಡ್ಡಿಯನ್ನು ಆಘ್ರಾಣಿಸಿದ. ನಾಸಿಕದ ಎರಡು ರಂಧ್ರಗಳನ್ನು ಭೇದಿಸಿ ಮಸ್ತಕವನ್ನು ಹೊಕ್ಕ ವಾಸನೆಯಿಂದ ವಾಸಸ್ವಾಮಿಯ ಶರೀರ ಸಿಟ್ಟಿನಿಂದ ಕಂಪಿಸಲಾರಂಭಿಸಿತು. ಕಣ್ಣುಗಳು ಕೆಂಪು ಬಣ್ಣಕ್ಕೆ ತಿರುಗಿ ಮುಖದಲ್ಲಿ ಕೋಪ ರುದ್ರತಾಂಡವವಾಡತೊಡಗಿತು. ಕುಳಿತಿದ್ದ ವಾಸಸ್ವಾಮಿ ಧಿಗ್ಗನೆ ಎದ್ದು ಎಡಗಾಲಿನಿಂದ ರುದ್ರೇಗೌಡರ ಆತ್ಮವಿರುವ ದರ್ಭೆಯನ್ನು ಮತ್ತು ಎದುರಿರುವ ಎಡೆಯನ್ನು ಝಾಡಿಸಿ ಒದ್ದ. ಅವನು ಒದ್ದ ರಭಸಕ್ಕೆ ಎಡೆ ಪಡಸಾಲೆ ದಾಟಿ ಅಂಗಳದಲ್ಲಿ ಠಣ್ ಎಂದು ಬಿದ್ದು ಗರಗರ ತಿರುಗಲಾರಂಭಿಸಿತು. ತಟ್ಟೆಯಲ್ಲಿದ್ದ ತಿಂಡಿಗಳು ನೆಲದ ಪಾಲಾದವು. ನೆರೆದಿದ್ದ ಕುಟುಂಬಸ್ಥರು, ನೆಂಟರು, ಊರಿನ ಹಿರಿಯರು ವಾಸಸ್ವಾಮಿಯ ವರ್ತನೆಗೆ ಸ್ತಂಭೀಭೂತರಾದರು. ಶಿವನಗೌಡರಿಗೆ ಎಲ್ಲವೂ ಅಯೋಮಯ ಅಗೋಚರ ಅನಿಸಲಾರಂಭಿಸಿತು. ತನ್ನ ಪೂಜಾ ಸಾಮಗ್ರಿಗಳ ಚೀಲವನ್ನು ಕೈಗೆ ತೆಗೆದುಕೊಂಡ ವಾಸಸ್ವಾಮಿ 'ಅಪಚಾರ ಅನಾಚಾರ. ರುದ್ರೇಗೌಡರು ಈ ಮನೆತನದ ಬೀಜದ ಸೃಷ್ಟಿಯಲ್ಲ. ಅವರ ಆತ್ಮದಾಗ ಗೌಡರ ಮನೆತನದ ವಾಸನಿ ಬರ್ಲಿಕತ್ತಿಲ್ಲ. ಊರ ಹೊರಗಿನಕೇರಿ ವಾಸನಿ ಬರಲಿಕತ್ತದ' ಎನ್ನುತ್ತ ದಾಪುಗಾಲಿಟ್ಟು ಅಂಗಳ ದಾಟಿ ಮನೆಯ ದಾರಿ ಹಿಡಿದ.

ಅವಮಾನದಿಂದ ಶಿವನಗೌಡರಿಗೆ ನೆಂಟರು ಮತ್ತು ದಾಯಾದಿಗಳೆದುರು ತಲೆ ತಗ್ಗಿಸುವಂತಾಯಿತು. ವಾಸಸ್ವಾಮಿಯಿಂದಾಗಿ ಈ ಮುದಿ ವಯಸ್ಸಿನಲ್ಲಿ ತಾನು ಬಂಧುಬಳಗದವರ ಸಂಶಯಕ್ಕೆ ಗುರಿಯಾಗಬೇಕಾಯಿತೆಂದು ಶಿವನಗೌಡರ ಅಜ್ಜಿ ಗಂಗಮ್ಮ ಗೋಳೋ ಎಂದು ಅಳಲಾರಂಭಿಸಿದಳು. ಅದೇರಾತ್ರಿ ಮಠದ ಹಿರಿಯ ಅಪಗೊಳ ನೇತೃತ್ವದಲ್ಲಿ ಸಭೆ ಸೇರಿದ ಊರ ಪ್ರಮುಖರು ಶಿವನಗೌಡರಿಗೆ ಗ್ರಾಮಪಂಚಾಯಿತಿ ಚುನಾವಣೆಯಲ್ಲಿ ಬೆಂಬಲಿಸದಿರಲು ನಿರ್ಧರಿಸಿ ಸಭೆಯ ತೀರ್ಮಾನವನ್ನು ಎಲ್ಲರೂ ಪಾಲಿಸಬೇಕೆಂದು ಫರ್ಮಾನು ಹೊರಡಿಸಿದರು. ಶಿವನಗೌಡರ ಪರಮ ವಿರೋಧಿ ದಾಯಾದಿ ಅಂದಾನಪ್ಪಗೌಡರು ಚುನಾವಣೆಯಲ್ಲಿ ಗೆದ್ದು ಪಂಚಾಯಿತಿ ಅಧ್ಯಕ್ಷರಾದರು. ತಮಗೆ ಚುನಾವಣೆ ಟಿಕೇಟ್ ಕೈತಪ್ಪಿ ಹೋದದ್ದರ ಹಿಂದೆ ವಾಸಸ್ವಾಮಿಯ ಕೈವಾಡ ಇದೆ ಎನ್ನುವ ಗುಮಾನಿ ಶಿವನಗೌಡರ ಕನಸಿನಲ್ಲೂ ಸುಳಿಯಲಿಲ್ಲ. ತಮ್ಮ ದುಸ್ಥಿತಿಗೆ ಅಜ್ಜಿ ಗಂಗಮ್ಮನೇ ಕಾರಣ ಎಂದು ಅವರು ಸಾಯುವವರೆಗೂ ಬಲವಾಗಿ ನಂಬಿದ್ದರು. ತಿರುಪೆ ಎತ್ತಿ ಬದುಕುವ ಜಾತಿ ಎಂದು ಗವಿಸಿದ್ದಸ್ವಾಮಿಗೆ ಹಿಂದೊಮ್ಮೆ ಶಿವನಗೌಡರು ಮಾಡಿದ ಅಪಮಾನಕ್ಕೆ ಮಗ ವಾಸಸ್ವಾಮಿ ಪ್ರತೀಕಾರ ತೀರಿಸಿಕೊಂಡ ಎಂದು ಅಲ್ಲಲ್ಲಿ ಗುಸು ಗುಸು ಮಾತುಗಳು ಕೇಳಿ ಬಂದರೂ ಯಾರಿಗೂ ಬಾಯ್ಬಿಟ್ಟು ಹೇಳುವ ಧೈರ್ಯವಿರಲಿಲ್ಲ. ಈ ಘಟನೆಯ ನಂತರ ವಾಸಸ್ವಾಮಿ ಹೆಸರು ಕೇಳಿದರೆ ಜನರು ಭಯಬೀಳುವಂತಾಯಿತು.

* * *

'ಎಂಕಟೇಸಪ್ಪ ಇದು ಬರ್ಕತ್ತಾಗಂಗಿಲ್ಲ. ಹುಡುಗ ನಿಮ್ಮ ಪೈಕಿ ಅಲ್ಲ. ಹುಡುಗನ ನಡು ನೆತ್ತಿದಾಗ ಎರಡು ನಮೂನಿ ವಾಸನಿ ಬರಲಿಕತ್ತದ. ಅಂದರ ಇದು ಕಲಬೆರಕಿ ಅದಾ' ವಾಸಸ್ವಾಮಿ ಮಾತು ಕೇಳಿ ಪ್ರಿನ್ಸಿಪಾಲ್ ವೆಂಕಟೇಶ ಪುರೋಹಿತ ಭೂಮಿಗಿಳಿದು ಹೋದರು. ಬೆಂಗಳೂರಿನ ಪ್ರತಿಷ್ಠಿತ ಸಾಫ್ಟ್‌ವೇರ್ ಕಂಪನಿಯಲ್ಲಿ ಕೆಲಸ ಮಾಡುತ್ತಿರುವ ತಮ್ಮ ಏಕೈಕ ಸುಪುತ್ರಿ ಶ್ರೀಲಕ್ಷ್ಮಿ ಸಹೋದ್ಯೋಗಿಯನ್ನೇ ಮದುವೆಯಾಗುತ್ತೇನೆಂದು ಹಟ ಹಿಡಿದಾಗ ಅವರು ವಾಸಸ್ವಾಮಿಯ ಮೊರೆ ಹೋಗಿದ್ದರು. ಕೋಲುಮುಖ, ನೀಳನಾಸಿಕ, ಹಣೆಯ ಎಡ ಬಲದಲ್ಲಿ ಗಂಧದಿಂದ ನಿರ್ಮಾತೃಗೊಂಡ ಶಂಖ ಮತ್ತು ಚಕ್ರ, ಭ್ರೂಮಧ್ಯದಲ್ಲಿ ಮಂತ್ರಾಕ್ಷತೆ ಸಹಿತ ಉದ್ದನೆಯ ತಿಲಕ, ತಲೆಯ ಹಿಂದೆ ದೃಷ್ಟಿಗೆ ಗೋಚರಿಸುತ್ತಿದ್ದ ಶಿಖೆಯಿಂದ